# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ಸಂಗ್ರಹಣೆಗಳಲ್ಲಿ ಠೇವಣಿ ಪಡೆಯಲು ರಿಯಾಯಿತಿ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(I), ದಿನಾಂಕ: 06-08-2005.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(II), ದಿನಾಂಕ: 06-08-2005.
3. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(III), ದಿನಾಂಕ: 06-08-2005.
4. ಭಾರತ ಸರ್ಕಾರದ ಪತ್ರ ಸಂಖ್ಯೆ: F.9/4/2020-PPD Dated: 12-11-2020.

*********

**ಪ್ರಸ್ತಾವನೆ:**

ಕೋವಿಡ್-19 ಸಾಂಕ್ರಾಮಿಕದ ಹಿನ್ನಲೆಯಲ್ಲಿ ಹಲವು ವಾಣಿಜ್ಯ ಸಂಘಟನೆಗಳು ಮತ್ತು ಗುತ್ತಿಗೆದಾರರು ಆರ್ಥಿಕ ಸಂಕಷ್ಟವನ್ನು ಎದುರಿಸುವಂತಾಗಿರುತ್ತದೆ. ಇದರಿಂದಾಗಿ ಗುತ್ತಿಗೆದಾರರ ಒಟ್ಟು ನಿರ್ವಹಣೆ ಮೇಲೆ ಪರಿಣಾಮ ಉಂಟಾಗುತ್ತಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಕುರಿತು ಭಾರತ ಸರ್ಕಾರದಿಂದ ಟೆಂಡರ್ ಹಾಗೂ ಒಪ್ಪಂದದ ಷರತ್ತುಗಳಲ್ಲಿ ರಿಯಾಯಿತಿ ನೀಡುವ ವಿಷಯವನ್ನು ಪರಿಗಣಿಸುವಂತೆ ಮೇಲೆ ಓದಲಾದ (4)ರ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ, ಗುತ್ತಿಗೆದಾರರು ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್‌ಗಳಲ್ಲಿ ಸ್ಪರ್ಧಾತ್ಮಕವಾಗಿ ಭಾಗವಹಿಸಲು ಅನುಕೂಲವಾಗುವಂತೆ ಮತ್ತು ಸರ್ಕಾರಕ್ಕೆ ಸ್ಪರ್ಧಾತ್ಮಕ ದರ ಪಡೆಯುವ ಹಿತದೃಷ್ಟಿಯಿಂದ ಸಾರ್ವಜನಿಕ ಸಂಗ್ರಹಣಾ ಪ್ರಾಧಿಕಾರಗಳಿಂದ ಪಡೆಯಲಾಗುವ EMD, ಭದ್ರತಾ ಠೇವಣಿ (Performance Security) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (Additional performance Security) ಷರತ್ತುಗಳಲ್ಲಿ ಕೆಲವೊಂದು ರಿಯಾಯಿತಿಗಳನ್ನು ನೀಡಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ-12/2020, ಬೆಂಗಳೂರು, ದಿನಾಂಕ: 22.12.2020**

ಸಾರ್ವಜನಿಕ ಸಂಗ್ರಹಣೆ ಕುರಿತಾಗಿ ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಿರುವ ಮಾದರಿ ಟೆಂಡರ್ ದಾಖಲೆಗಳಲ್ಲಿನ EMD, ಭದ್ರತಾ ಠೇವಣಿ (Performance Security) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (Additional Performance Security) ಷರತ್ತುಗಳಲ್ಲಿ ದಿನಾಂಕ:31-12-2021ರವರೆಗೆ ಮಾತ್ರ ಅನ್ವಯವಾಗುವಂತೆ ಈ ಕೆಳಕಂಡಂತೆ ಮಾರ್ಪಾಡು ಮಾಡಿ ಆದೇಶಿಸಿದೆ.

1. **EMD:** ದಿನಾಂಕ:31.12.2021 ರವರೆಗೆ ಕರೆಯಲಾಗುವ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಮಾದರಿ ಟೆಂಡರ್ ದಾಖಲೆಗಳಲ್ಲಿ ನಿಗದಿಪಡಿಸಿರುವಂತೆ ಪ್ರಸ್ತುತ ಪಡೆಯಲಾಗುತ್ತಿರುವ EMDಗೆ ಬದಲಾಗಿ ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ EMD Declaration ನಮೂನೆಯನ್ನು ಟೆಂಡರ್ ದಾಖಲೆಗಳಲ್ಲಿ ಅಳವಡಿಸಿ ಗುತ್ತಿಗೆದಾರರಿಂದ Declaration ಪಡೆಯತಕ್ಕದ್ದು.

2. **ಭದ್ರತಾ ಠೇವಣಿ (Performance security):** ಭದ್ರತಾ ಠೇವಣಿ ಮೊತ್ತವನ್ನು ಗುತ್ತಿಗೆ ಮೊತ್ತದ ಶೇ.5 ರಿಂದ ಶೇ.3ಕ್ಕೆ ನಿಗದಿಪಡಿಸಲಾಗಿರುತ್ತದೆ. ಸದರಿ ರಿಯಾಯಿತಿಯು ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಒಪ್ಪಂದಗಳಿಗೂ (Existing Contracts) ಮತ್ತು ದಿನಾಂಕ:31.12.2021ರವರೆಗೆ ಕರೆಯಲಾಗುವ ಟೆಂಡರ್ ಮತ್ತು ಮಾಡಿಕೊಳ್ಳಲಾಗುವ ಒಪ್ಪಂದಗಳಿಗೆ ಅನ್ವಯವಾಗುವುದು. ಆದರೆ ಚಾಲ್ತಿಯಲ್ಲಿರುವ ಒಪ್ಪಂದಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ/Arbitration ನಲ್ಲಿ ಪ್ರಕರಣ/ವಿವಾದವಿದ್ದಲ್ಲಿ ಅಥವಾ ಪ್ರಕರಣ/ವಿವಾದ ಉಂಟಾಗುವ ನಿರೀಕ್ಷೆ ಇದ್ದಲ್ಲಿ ಸದರಿ ರಿಯಾಯಿತಿಯು ಅನ್ವಯವಾಗುವುದಿಲ್ಲ.

3. **ಹೆಚ್ಚುವರಿ ಭದ್ರತಾ ಠೇವಣಿ (Additional Performance Security):** ದಿನಾಂಕ: 31.12.2021 ರವರೆಗೆ ಕರೆಯಲಾಗುವ ಟೆಂಡರ್ ಮತ್ತು ಮಾಡಿಕೊಳ್ಳಲಾಗುವ ಒಪ್ಪಂದಗಳಿಗೆ ಸಂಬಂಧಿಸಿದಂತೆ ಅಸಮತೋಲಿತ ಟೆಂಡರ್ (unbalanced tender)ಗಳಲ್ಲಿ ಅಗತ್ಯವೆಂದು ನಿಗದಿಪಡಿಸಲಾಗುವ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತದ ಶೇ.50ರಷ್ಟು ಮೊತ್ತವನ್ನು ಮಾತ್ರ ಠೇವಣಿಯಾಗಿ ಪಡೆಯತಕ್ಕದ್ದು.

4. ಈ ಆದೇಶದಂತೆ ಪಡೆಯಲಾಗುವ ಭದ್ರತಾ ಠೇವಣಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿಯು ಆಯಾ ಒಪ್ಪಂದದ ಪೂರ್ಣ ಅವಧಿಗೆ ಅನ್ವಯವಾಗುತ್ತದೆ. ಯಾವುದೇ ಕಾರಣಕ್ಕೂ ದಿನಾಂಕ:31.12.2021ರ ನಂತರ ಪರಿಷ್ಕರಿಸತಕ್ಕದ್ದಲ್ಲ.

5. ಸದರಿ ಆದೇಶವನ್ನು ಸಧ್ಯದ ಕೋವಿಡ್-19 ಪರಿಸ್ಥಿತಿ ಹಿನ್ನಲೆಯಲ್ಲಿ ಗುತ್ತಿಗೆದಾರರ ಆರ್ಥಿಕ ಹಿತದೃಷ್ಟಿಯಿಂದ ಹೊರಡಿಸಲಾಗುತ್ತಿದ್ದು, ಇದನ್ನು ಪೂರ್ವನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ.

6. ಒಂದು ವೇಳೆ ಮಾದರಿ ಟೆಂಡರ್ ದಾಖಲೆಗಳಲ್ಲಿ ನಿಗದಿಪಡಿಸಿರುವಂತೆ ಇ.ಎಂ.ಡಿ., ಭದ್ರತಾ ಠೇವಣಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿಯನ್ನು ಪಡೆಯುವುದು ಅತ್ಯಂತ ಅವಶ್ಯವೆಂದು

ಕಂಡುಬಂದ ಸಂದರ್ಭದಲ್ಲಿ ಮಾತ್ರ ಟೆಂಡರ್ ಅಂಗೀಕಾರ ಪ್ರಾಧಿಕಾರದ ಅನುಮೋದನೆ ಪಡೆದು ಕ್ರಮವಹಿಸುವುದು.

7. ಮೇಲಿನ ಮಾರ್ಪಾಡುಗಳು ಎಲ್ಲಾ ಕಾಮಗಾರಿ, ಸರಕು, ಸೇವೆಗಳು ಮತ್ತು ಸಮಾಲೋಚನಾ ಸೇವೆಗಳ ಸಂಗ್ರಹಣೆಗಳಲ್ಲಿ ಸಂದರ್ಭಕ್ಕನುಸಾರವಾಗಿ ಅನ್ವಯವಾಗುತ್ತವೆ.

8. ಈ ಆದೇಶದಲ್ಲಿನ ನಿರ್ದೇಶನಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 2(d)ರಡಿ ವ್ಯಾಖ್ಯಾನಿಸಲಾದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳಿಗೆ ಅನ್ವಯವಾಗುತ್ತಿದ್ದು, ಈ ಮಾರ್ಪಾಡುಗಳನ್ನು ಸಂಗ್ರಹಣಾ ಪ್ರಾಧಿಕಾರಗಳು ಮಾದರಿ ಟೆಂಡರ್ ದಾಖಲೆಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು.

9. ಉಳಿದಂತೆ ಮಾದರಿ ಟೆಂಡರ್ ದಾಖಲೆಗಳಲ್ಲಿನ ಯಾವುದೇ ಅಂಶಗಳಲ್ಲಿ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಐ.ಎಸ್.ಎನ್.ಪ್ರಸಾದ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು

ಪ್ರತಿ:

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
3. ಮಹಾಲೇಖಾಪಾಲರು (ಎ&ಇ), ಕರ್ನಾಟಕ ಸರ್ಕಾರ, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಹಾಗೂ ಕರ್ನಾಟಕ ವಿಧಾನ ಪರಿಷತ್ತು
5. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
6. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
7. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
9. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
10. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು

11. ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಾಹಣಾಧಿಕಾರಿಗಳು
12. ಆಂತರಿಕ ಆರ್ಥಿಕ ಸಲಹೆಗಾರರು
13. ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು / ವಿಶೇಷಾಧಿಕಾರಿಗಳು / ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
14. ಶಾಖೆಯ ರಕ್ಷ ಕಡತ / ಹೆಚ್ಚುವರಿ ಪ್ರತಿ.

## Annexure

### EMD Declaration

I, hereby submit a declaration that the tender submitted by the undersigned, on behalf of the tenderer............................(**Name of the Tenderer**),shall not be withdrawn or modified during the period of validity or extended period of validity.

I, on behalf of the tenderer..........................(**Name of the Tenderer**), also accept the fact that in case the tender is withdrawn or modified during the period of its validity/extended validity period or if we fail to sign the contract in case the contract is awarded to us or we fail to submit a Performance Security and Additional Performance Security, if any, before the deadline fixed in the Tender Document, then ..............................(name of the tenderer)will be debarred for participation in the tendering process for the Procurements of this Procurement Entity for a period of **one year** from the date of default.

(Signature of the Authorised Signatory,
Official Seal)